ದಿನಾಂಕಃ 21-12-2020 ಸಿ.ಸಿ. 1162/2019, ಪಿ ಡಬ್ಲ್ಯು - 1

ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಶ್ರೀ ಜೆ ಜಿ ಕೆ ವಕೀಲರಿಂದಃ-

ನಾನು ಕಾಫಿ ಮತ್ತು ಮೆಣಸು ವ್ಯಾಪಾರ ಮಾಡಿದಾಗ ರಶೀದಿಯನ್ನು ನೀಡುತ್ತೇನೆ. ನಾನು ಆರೋಪಿಯೊಂದಿಗೆ ವ್ಯಾಪಾರ ಮಾಡಿದ ಕುರಿತು ಯಾವುದೇ ರಶೀದಿ ನೀಡಿರುವುದಿಲ್ಲ. 3 ಟನ್ ಮೆಣಸು ಅಧಿಕ ಮೊತ್ತದ ವ್ಯಾಪಾರ ಎಂದರೆ ಸರಿ . ಸದರಿ ಮೆಣಸನ್ನು ನನ್ನ ಗ್ರಾಹಕರು ಮಾರಾಟಕ್ಕೆಂದು ನನ್ನ ಬಳಿ ಇಟ್ಟಿದ್ದರು. ನಾನು ನನ್ನ ಗ್ರಾಹಕರಿಗೆ ಸದರಿ ಮೆಣಸಿನ ಖರೀದಿಯ ಕುರಿತು ರಶೀದಿ ನೀಡಿರುತ್ತೇನೆ. ಸದರಿ ರಶೀದಿಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಆರೋಪಿ ಈ ಪ್ರಕರಣದಲ್ಲಿ ಹೇಳಿದಂತೆ ಮಾಡಲಾದ ವ್ಯವಹಾರಕ್ಕೂ ಮೊದಲು ನನ್ನೊಂದಿಗೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ಆರೋಪಿ ನನಗೆ ಪರಿಚಿತರಾಗಿದ್ದರಿಂದ ಮೆಣಸನ್ನು ಹಣ ಪಡೆಯದೇ ನೀಡಿರುತ್ತೇನೆ. ನಂತರದಲ್ಲಿ ಆರೋಪಿ ನನಗೆ ಚೆಕ್ಕನ್ನು ನೀಡಿರುತ್ತಾರೆ.

ದಿಃ 06-12-2018 ಆರೋಪಿ ನನ್ನಿಂದ ಮೆಣಸನ್ನು ಖರೀದಿ ಮಾಡಿರುತ್ತಾರೆ. ನಾನು ಮೆಣಸನ್ನು ಅವರ ಸ್ವಾಧೀನಕ್ಕೆ ಕೊಟ್ಟ ಕುರಿತು ಯಾವುದೇ ದಾಖಲೆ ನಿರ್ವಹಣೆ ಮಾಡಿರುವುದಿಲ್ಲ. ಸಾಕ್ಷಿ ಮುಂದುವರಿದು ಆರೋಪಿ ನನಗೆ ಚಿರಪರಿಚಿತರಾಗಿದ್ದರಿಂದ ದಾಖಲೆ ನಿರ್ವಹಣೆ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿ ನನ್ನಿಂದ ಕಾಳು ಮೆಣಸು ಪಡೆಯುವ 3-4 ವರ್ಷಗಳಿಗಿಂತ ಪೂರ್ವದಲ್ಲಿ ಪರಿಚಿತರು. ಆರೋಪಿ ಕಾಫಿ ತೋಟ ಹೊಂದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿ ನನ್ನಿಂದ 3 ಟನ್ ಮೆಣಸನ್ನು ಖರೀದಿಸಿದ ಉದ್ದೇಶ ನನಗೆ ಗೊತ್ತಿಲ್ಲ. ಆರೋಪಿ ಅಂಗಡಿ ಇಟ್ಟು ಕೊಂಡು ಕಾಳು ಮೆಣಸನ್ನು ಮಾರುತ್ತಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಆರೋಪಿಗೆ ಅಷ್ಟೊಂದು ಮೆಣಸನ್ನು ಖರೀದಿ ಮಾಡಲು ಇರುವ ಕಾರಣವನ್ನು ಕೇಳಿರುವುದಿಲ್ಲ. ಆರೋಪಿ ಕೃಷಿಕರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿ ಕಾಫಿ ಮತ್ತು ಕಾಳು ಮೆಣಸು ಬೆಳೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಕಾಫಿ ಮತ್ತು ಮೆಣಸನ್ನು ಬೆಳೆಯುವುದರಿಂದ ನನ್ನ ಬಳಿ ಅವರು ಮೆಣಸನ್ನು ಖರೀದಿ ಮಾಡುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯೇ ನನಗೆ ಮೆಣಸನ್ನು ಮಾರಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ

ದಿಃ 06-12-2018 ರಂದು ಚೆಕ್ಕನ್ನು ನೀಡಿದ್ದು , ಅದರ ಮೇಲೆ ದಿಃ 14-01-2019 ಎಂದು ನಮೂದಿಸಿ , ಆ ದಿನ ನಗದೀಕರಣಕ್ಕೆ ಬ್ಯಾಂಕಿನಲ್ಲಿ ಸಲ್ಲಿಸಲು ಹೇಳಿರುತ್ತಾರೆ. ನಿಪಿ 2 ರಲ್ಲಿ ಖಾತೆಯು ಬ್ಲಾಕ್ ಆದ ಕಾರಣ ನಿಪಿ 1 ನ್ನು ಮರಳಿ ನೀಡಲಾಗಿದೆ ಎಂದು ಕಾರಣ ನೀಡಿ ಹಿಂಬರಹ ನೀಡಲಾಗಿದೆ ಎಂದರೆ ಸರಿ . ಆ ರೀತಿ ಬ್ಯಾಂಕಿನವರು ಹಿಂಬರಹ ನೀಡುವ ಪೂರ್ವದಲ್ಲಿ ಖಾತೆದಾರರು ಬ್ಯಾಂಕಿಗೆ ಅರ್ಜಿ ಸಲ್ಲಿಸಬೇಕು ಎಂದರೆ ಸಾಕ್ಷಿ ತನಗೆ ಆ ಕುರಿತು ಮಾಹಿತಿ ಇಲ್ಲ, ತಾನು ಆರೋಪಿ ಹೇಳಿದಂತೆ ಚೆಕ್ಕನ್ನು ದಿಃ 14-01-2019 ರಂದು ನಗದೀಕರಣಕ್ಕೆ ಹಾಕಿರುವುದಾಗಿ ನುಡಿಯುತ್ತಾರೆ.

ಆರೋಪಿ ನನಗೆ ನಿಪಿ 1 ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಚೆಕ್ ಕಳೆದು ಹೋದ ಕಾರಣ ಬ್ಯಾಂಕಿನವರಿಗೆ ಚೆಕ್ ನಗದೀಕರಣ ಮಾಡದಂತೆ ಮನವಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಿಪಿ 1 ನಗದೀಕರಣಗೊಂಡಿರವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ 3 ಮತ್ತು 4 ರಂತೆ ನೋಟೀಸ್ ನೀಡುವ ಪೂರ್ವದಲ್ಲಿ ಆರೋಪಿಗೆ ಮೆಣಸು ಮಾರಾಟ ಮಾಡಿರುವ ವಿಚಾರವನ್ನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ನಿಪಿ 3 ಮತ್ತು 4 ರಲ್ಲಿ ಮೆಣಸು ಮಾರಾಟ ಮಾಡಿದ ವಿಚಾರವನ್ನು ಬರೆದಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಇಂಗ್ಲೀಷ್ ತಿಳಿಯುವುದಿಲ್ಲ ಎಂದು ನುಡಿಯುತ್ತಾರೆ.

ನಾನು ನನ್ನ ವಕೀಲರ ಮೂಲಕ ಆರೋಪಿಯ ಬಲ್ಲಮಾವಟಿ ವಿಳಾಸಕ್ಕೆ ನಿಪಿ 4 ನ್ನು ಕಳುಹಿಸಿರುತ್ತೇನೆ. ಸದರಿ ನೋಟೀಸ್ ತಲುಪಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಆರೋಪಿಯ ಪರಿಚಯವಿಲ್ಲ, ಆದ್ದರಿಂದ ನಾನು ಆರೋಪಿಯ ನಿಜವಾದ ವಿಳಾಕ್ಕೆ ನೋಟೀಸ್ ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ನನಗೂ ಯಾವುದೇ ವ್ಯವಹಾರಗಳಿರುವುದಿಲ್ಲ, ಆರೋಪಿ ನನಗೆ ನಿಪಿ 1 ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-
ಅಪರ ಜೆಎಂಎಫ್‌ಸಿ, ಮಡಿಕೇರಿ